ರಾತ್ರಿ 8 ಗಂಟೆಗೆ ಇನ್ನೂ ಐದು ನಿಮಿಷ ಬಾಕಿ ಇರುವಾಗಲೇ ವರಕನ್ಯಾ ಮಾಹಿತಿ ಕೇಂದ್ರದ ಸಂಚಾಲಕ ಒಂದೊಂದಾಗಿ ಕಿಟಕಿ ಬಾಗಿಲು ಮುಚ್ಚತೊಡಗಿದ. ಸರಿಯಾಗಿ 8 ಗಂಟೆಗೆ ಉಳಿದ 5–6 ಜನರಿಂದ ಫೈಲ್‌ಗಳನ್ನು ಇಸಿದುಕೊಂಡು ಬೀಗ ಜಡಿದು ರೇನಕೋಟ ಏರಿಸಿಕೊಂಡು ಸುರಿಯುತ್ತಿರುವ ಮಳೆಯಲ್ಲಿಯೇ ಜಾಗ ಖಾಲಿ ಮಾಡಿದ. ರಾಯರು ಹೊರಗಡೆ ಜಗಲಿಯಲ್ಲಿ ನಿಂತು ಮಳೆಯಲ್ಲಿ ಹೋಗುವುದೋ ಬೇಡವೋ ಎಂಬ ಸಂದಿಗ್ಧದಲ್ಲಿದ್ದಾಗ ಅವಳನ್ನು ಗಮನಿಸಿದರು. ಹೌದು ಸಂದೇಹವೇ ಇಲ್ಲ ಅವಳೇ ಎಂಬ ತೀರ್ಮಾನಕ್ಕೆ ಬಂದರು.

ದಿನವೂ ಪಾರ್ಕಿನಲ್ಲಿ ವಾಕ್ ಮಾಡುವಾಗ ಪ್ರತಿ ಸುತ್ತಿಗೂ ಎದುರಾಗುವ ಪರಿಚಿತ ಮುಖ. ಸುಮಾರು 50 ರ ಆಸುಪಾಸಿನಲ್ಲಿರುವ ಎತ್ತರ ನಿಲುವಿನ, ಆಕರ್ಷಕ, ನಗೆಮುಖದ, ಮಹಿಳೆ. ರಾಯರು ಅವಳನ್ನು ಗಮನಿಸುತ್ತಿರುವಾಗಲೇ ಅವಳು ಮಳೆಯಲ್ಲಿಯೇ ಧಾವಿಸಿ ಹೋಗಿ ಎರಡು ಮೂರು ಆಟೋದವರಿಂದ ಇಲ್ಲವೆನಿಸಿಕೊಂಡು ವಾಪಸ್ ಬಂದಿದ್ದಳು. 'ನೀವೂ ರಾಜಾಜಿನಗರಕ್ಕೆ ಹೋಗುವವರಲ್ಲವೇ' ರಾಯರು ಅವಳನ್ನು ಆತ್ಮೀಯವಾಗಿ ವಿಚಾರಿಸಿದರು. ಹೌದೆಂದು ಮಹಿಳೆ ತಲೆ ಅಲ್ಲಾಡಿಸಿದಳು. 'ಹಾಳು ಮಳೆ ನಿಲ್ಲಾನೆ ಇಲ್ಲ, ಈ ಮಳೆಯಲ್ಲಿ ಆಟೋ ಸಿಗುವುದೂ ಕಷ್ಟ' ರಾಯರು ತಮ್ಮಷ್ಟಕ್ಕೆಂಬಂತೆ ಹೇಳಿದರು. ಮಹಿಳೆ ಸಮ್ಮತಿ ಸೂಚಕವಾಗಿ ಗೋಣಲ್ಲಾಡಿಸಿದಳು.

ಮುಂದೆ ಹತ್ತು ನಿಮಿಷದಲ್ಲಿ ಮಳೆ ಕಡಿಮೆಯಾದಾಗ, ರಾಯರು ಒಂದು ಆಟೊ ಹಿಡಿದು 'ಬನ್ನಿ, ಆಟೊ ಸಿಕ್ಕಿದೆ, ನಿಮ್ಮನ್ನು ಮನೆಗೆ ಬಿಟ್ಟು ನಾನು ಹೋಗುತ್ತೇನೆ. ಈ ಮಳೆಯಲ್ಲಿ ಇನ್ನೊಂದು ಆಟೊ ಸಿಗುವುದು ಎಂತಹ ಮಾತೋ' ಎಂದರು. ಅವಳು ಮರು ಮಾತಾಡದೇ ಆಟೊ ಹತ್ತಿದಳು. 'ಮಗನಿಗೆ ಕನ್ಯೆ ನೋಡಲು ಬಂದದ್ದೇ?' ರಾಯರು ವಿಚಾರಿಸಿದರು. 'ಇಲ್ಲ ಮಗಳಿಗೆ ವರ ಹುಡುಕಲು ಬಂದದ್ದು' ಮಹಿಳೆ ಚುಟುಕಾಗಿ ಉತ್ತರಿಸಿದಳು. 'ಹೌದಾ, ನಾನು ನನ್ನ ಮಗನಿಗೆ ಕನ್ಯೆ ಹುಡುಕಲು ಬಂದದ್ದು' ರಾಯರು ಮುಂದುವರೆಸಿದರು. ಹೀಗೇ ಅವರ ಸಂಭಾಷಣೆ ಮುಂದುವರೆದು ಇಬ್ಬರ ನಡುವಿನ ಸಂಕೋಚ ಮಾಯವಾಗಿ ಒಂದು ತೆರನಾದ ಆತ್ಮೀಯತೆ ಮೂಡಿತು. ರಾಯರು ಅವಳ ಮನೆ ಅಡ್ರೆಸ್ಸ್ ತಿಳಿದುಕೊಂಡು ಅವಳನ್ನು ಮನೆಗೆ ಬಿಟ್ಟು, ತಮ್ಮ ಮನೆಗೆ ಬಂದು ಅನ್ನಕ್ಕೆ ಕುಕ್ಕರ್ ಸೆಟ್ ಮಾಡಿದರು.

ರಾತ್ರಿ 11.30 ಆದರೂ ರಾಯರಿಗೆ ನಿದ್ರೆ ಬರಲಿಲ್ಲ. ಮೊದಲು ಹೀಗಾಗುತ್ತಿರಲಿಲ್ಲ. ಮಲಗಿದ ತಕ್ಷಣ ನಿದ್ರೆ ಬರುತ್ತಿತ್ತು. ಅವರ ಹೆಂಡತಿ ಹೋದ ಮೇಲೆ, ಅಂದರೆ ಎರಡು ವರುಷಗಳಿಂದ ಹೀಗಾಗುತ್ತಿದೆ. ಮನೆಯ ಜವಾಬ್ದಾರಿ, ಬ್ಯಾಂಕಿನ ಜವಾಬ್ದಾರಿಯಿಂದ ಹೀಗಾಗುತ್ತಿದೆ. ಆಯಿತು ಇನ್ನೊಂದೆರಡು ವರ್ಷ ಕಳೆದರೆ ಬ್ಯಾಂಕಿನ ಜವಾಬ್ದಾರಿ ಕಳೆದು ಹೋಗುತ್ತದೆ. ಎರಡು ವರುಷದ ನಂತರ ತಾವು ಅಂದುಕೊಂಡದ್ದನ್ನು ಮಾಡಬಹುದು. ಎಷ್ಟೊಂದು ಸಾಹಿತ್ಯ ಓದುವುದಿದೆ. ಇಷ್ಟು ದಿನವೂ ಅಂದುಕೊಂಡ ಪ್ರವಾಸ ಮಾಡಲಾಗಿಲ್ಲ. ನೆಂಟರಿಷ್ಟರ ಮನೆಗೆ ಹೋಗಲಾಗಿಲ್ಲ. ಕೊನೆಗೆ ಲೈಬ್ರರಿಗೆ ಹೆಸರು ನೋಂದಾಯಿಸಲೂ ಆಗಿಲ್ಲ. ಎಲ್ಲವನ್ನು ಒಂದೊಂದಾಗಿ ಮಾಡಿ ಮುಗಿಸಬೇಕು. ರಾಯರು ಮಗ್ಗಲು ಬದಲಿಸಿದರು. ಅವರ ಗತ ಜೀವನದ ಒಂದೊಂದೂ ಪ್ರಮುಖ ಘಟನೆಗಳು ಸ್ಮೃತಿಪಟಲದ ಮುಂದೆ ಹಾದು ಹೋದವು.

ಹಾಗೆ ನೋಡಿದರೆ ರಾಯರದುಸುಖೀ ಸಂಸಾರ. ರಾಯರು ವಿದ್ಯಾವಂತರು, ನೋಡಲು ಸ್ಫುರದ್ರೂಪಿ, ಕೈತುಂಬ ಬರುವ ಸಂಬಳ, ಬ್ಯಾಂಕಿನ ಒಳ್ಳೆಯ ನೌಕರಿ. ಈಗಲೂ ಅವರಿಗೆ 58 ವಯಸ್ಸೆಂದರೆ ಯಾರೂ ನಂಬುವುದಿಲ್ಲ. ಇವರ 25 ನೇ ವಯಸ್ಸಿಗೆ ಕನ್ಯಾ ಪಿತೃಗಳು ಕನ್ಯೆ ಕೊಡಲು ಸಾಲು ಹಿಡಿದಿದ್ದರು. ರಾಯರು ಆಗ ಮನ ಮೆಚ್ಚಿ ಕೈ ಹಿಡಿದಿದ್ದು ಸುಶೀಲಾಳನ್ನು. ಸುಶೀಲಾ ಆದರೂ ಅಷ್ಟೇ, ಹೆಸರಿಗೆ ತಕ್ಕಂತೆ ಶಾಂತ, ಸುಶೀಲ ಸ್ವಭಾವದವಳು. ರಾಯರ ಎಲ್ಲ ಬೇಕು ಬೇಡಿಕೆಗಳನ್ನು ಅರಿತು ಜೀವನದುದ್ದಕ್ಕೂ ಪೂರೈಸಿದಾಕೆ. ಮೊದಲು ನಯನಾ ನಂತರ ಎರಡು ವರುಷಗಳ ಅಂತರದಲ್ಲಿ ನವೀನ ಹುಟ್ಟಿದರು. ಆ ನಂತರದಲ್ಲಿ ರಾಯರ ಸಂಸಾರದಲ್ಲಿ ಬರೀ ಜೇನೇ. ನಯನಾ ಕಲಿತು ಬಿ.ಇ. ಮುಗಿಸಿ ವಿಪ್ರೋ ಸಂಸ್ಥೆಯಲ್ಲಿ ಕೆಲಸ ಹಿಡಿದಾಗ ತಮಗೆಷ್ಟು ಸಂತೋಷವಾಗಿತ್ತು. ಮುಂದೆ ಅವಳು ಅದೇ ಸಂಸ್ಥೆಯಲ್ಲಿ ಕೆಲಸ ಮಾಡುವ ರವಿಯನ್ನು ಪ್ರೀತಿಸಿ ಮದುವೆಯಾಗುವೆನೆಂದು ಹಟ ಹಿಡಿದಾಗ, ತಾವು ಒಪ್ಪದೇ, ಕೊನೆಗೆ ಹೆಂಡತಿಯ ಮಧ್ಯಸ್ಥಿತಿಯಿಂದಾಗಿ ಒಪ್ಪಿರಲಿಲ್ಲವೇ. ಏನೇ ಆದರೂ ಈಗ ಅವರು ಅಮೆರಿಕದಲ್ಲಿ ಸಂತೋಷವಾಗಿದ್ದಾರೆ. ಅಷ್ಟು ಸಾಕಲ್ಲವೇ. ರಾಯರು ಮತ್ತೆ ಮಗ್ಗಲು ಬದಲಿಸಿದರು.

ಇನ್ನು ನವೀನ, ಹಟಮಾರಿಯಾದರೂ, ಒಳ್ಳೆಯ ಅಂತಃಕರಣಿ, ಬುದ್ಧಿವಂತ ಹುಡುಗ. ಅವನು ತಮ್ಮಿಂದ ಹಾಗೂ ಸುಶೀಲಾಳಿಂದ ಬರೀ ಟಿ.ವಿ ನೋಡಬೇಡ, ಮೊಬೈಲ್ ಹಿಡಿದು ಕೂಡಬೇಡ, ಗೆಳೆಯರ ಹಿಂದೆ ಸುತ್ತಬೇಡ, ಪಾಠ ಓದಿಕೋ ಎಂದು ಎಷ್ಟು ಬಾರಿ ಹೇಳಿಸಿಕೊಂಡದ್ದಿದೆ. ಆದರೂ ಅವನು ವರುಷ ವರುಷವೂ ಮೊದಲ ದರ್ಜೆಯಲ್ಲಿ ತೇರ್ಗಡೆಯಾದಾಗ ತಮಗೆಷ್ಟು ಸಂತೋಷವಾಗಿರಲಿಲ್ಲ. ಅವನ ಫೈನಲ್ ಇಯರ್‌ನಲ್ಲಿ ಅಲ್ಲವೇ ಸುಶೀಲಳಿಗೆ ಹೊಟ್ಟೆನೋವು ಪ್ರಾರಂಭವಾಗಿದ್ದು, ಮುಂದೆ ಕೈಕಾಲು ಊದಿಕೊಂಡದ್ದು, ಆಸ್ಪತ್ರೆಗೆ ಸೇರಿಸಿದ್ದು, ವೈದ್ಯರು ಅದು ಕ್ಯಾನ್ಸರ್ ಎಂದು ಗುರುತಿಸಿದ್ದು, ತಾವೆಲ್ಲ ಹೌಹಾರಿ ಆಸ್ಪತ್ರೆಗೆ ಓಡಾಡಿದ್ದು, ಮುಂದೆ ತಿಂಗಳು ಕಳೆಯುವುದರಲ್ಲಿ ಅವಳು ಇಲ್ಲವಾಗಿದ್ದು.

ಆಗ ಶುರುವಾದವು ರಾಯರ ಕಷ್ಟಗಳ ಸರಮಾಲೆ. ಸುಶೀಲ ತೀರಿಕೊಂಡಾಗ ನವೀನನ ಬಿ.ಇ. ಕೊನೆಯ ವರ್ಷದ ಅಂತಿಮ ಪರೀಕ್ಷೆಗೆ ಕೇವಲ 15 ದಿನಗಳಿದ್ದವು. ಆಸ್ಪತ್ರೆಗೆ ಓಡಾಡುವುದರಲ್ಲಿ ಅವನಿಗೆ ಪುಸ್ತಕ ಮುಟ್ಟುವುದಾಗಿರಲಿಲ್ಲ. ಮಗಳು, ಅಮೆರಿಕದಿಂದ ಹೌಹಾರಿ ಬಂದು ದಿನಕರ್ಮ ಮುಗಿಸಿ ತಿರುಗಿ ಹೋಗಿದ್ದಳು. ಅಳಿಯ ಅಲ್ಲಿಂದಲೇ ಫೋನ್ ಮುಖಾಂತರ ದುಃಖ ವ್ಯಕ್ತಪಡಿಸುವ ಶಾಸ್ತ್ರ ಮುಗಿಸಿದ್ದ. ಮನೆ ಬಿಕೋ ಎನ್ನುತ್ತಿತ್ತು. ಬಂದು ಹೋಗುವ ಜನರಿಂದ ತನ್ನ ಅಭ್ಯಾಸಕ್ಕೆ ತೊಂದರೆ ಆಗಬಾರದೆಂದು ಮಗ ಗೆಳೆಯನ ಮನೆಗೆ ಹೋಗತೊಡಗಿದ. ಬೆಳಿಗ್ಗೆ ಬೇಗ ಎದ್ದು ಮನೆಗೆಲಸ ಮುಗಿಸಿ ಮಗನಿಗೆ ಡಬ್ಬಿ ತಯಾರಿಸಿ ತಮ್ಮ ಊಟದ ಶಾಸ್ತ್ರ ಮುಗಿಸಿ, ಬ್ಯಾಂಕಿಗೆ ಓಡುವುದು, ರಾತ್ರಿ ದಣಿದು ಬಂದು ಮತ್ತೆ ಅಡುಗೆ ಮಾಡಿಯೋ ಅಥವಾ ತಂದೋ ಊಟ ಮಾಡುವುದರಲ್ಲಿ ಸಾಕು ಸಾಕಾಗಿ ಹೋಗುತ್ತಿತ್ತು. ಮನೆಗೆಲಸದ ಅಭ್ಯಾಸವಿಲ್ಲದ ತಂದೆಯ ಪಾಡನ್ನು ನೋಡಲಾಗದೇ ನವೀನ ತಂದೆಯ ಸಹಾಯಕ್ಕೆ ಬಂದರೇ, ರಾಯರು ಅವನ ಅಭ್ಯಾಸಕ್ಕೆ ತೊಂದರೆಯಾದೀತೆಂದು ಅವನನ್ನು ತಡೆಯುತ್ತಿದ್ದರು.

ರಾಯರು ಎದ್ದು ಹೋಗಿ ನೀರು ಕುಡಿದು ಬಂದರು. ಆದರೂ ನಿದ್ರೆಯ ಸುಳಿವಿಲ್ಲ. ಎಷ್ಟೋ ಗೆಳೆಯರು ರಾಯರ ಕಷ್ಟ ನೋಡಲಾಗದೇ ಇನ್ನೊಂದು ಲಗ್ನವಾಗಲು ಸೂಚಿಸಿದಾಗ ರಾಯರು ಈ ವಯಸ್ಸಿನಲ್ಲಿ ಇನ್ನೆಂತಹ ಮದುವೆ ಎಂದು ನಯವಾಗಿಯೇ ತಿರಸ್ಕರಿಸಿದ್ದರು. ತಮಗೀಗ 58 ವಯಸ್ಸು. ಈ ವಯಸ್ಸಿನಲ್ಲಿ ತಮಗಾರು ಹೆಣ್ಣು ಕೊಡುತ್ತಾರೆ. ಹೆಣ್ಣು ಸಿಕ್ಕರೂ ತಮಗೆ ಅನುಕೂಲವಾದವಳು ಸಿಗುವಳೆ? ಬರುವವಳ ಸ್ವಭಾವ ಹೇಗಿರುತ್ತೋ ಏನೋ? ಮಕ್ಕಳೇನು ಅಂದಾರು? ಈ ವಯಸ್ಸಿನಲ್ಲಿ ಯಾಕೆ ರಿಸ್ಕ್ ತೆಗೆದುಕೊಳ್ಳುವುದು. ಎಂದು ಮದುವೆಯ ವಿಚಾರವನ್ನು ಬದಿಗೆ ಸರಿಸಿದ್ದರು.

ನವೀನ ಮೊದಲ ದರ್ಜೆಯಲ್ಲಿ ತೇರ್ಗಡೆಯಾದಾಗ ರಾಯರ ಹರ್ಷಕ್ಕೆ ಪಾರವಿರಲಿಲ್ಲ. ಅವನ ಸಹಪಾಠಿಗಳೆಲ್ಲ ಅಮೆರಿಕಕ್ಕೆ ಎಂಎಸ್ ಮಾಡಲು ಹೊರಟರೂ, ಅವನು ತಂದೆಯನ್ನು ಒಂಟಿಯಾಗಿ ಬಿಟ್ಟು ಹೋಗ ಬೇಕಾಗುತ್ತದೆಂಬ ಕಾರಣಕ್ಕೆ ಹಿಂದೇಟು ಹಾಕಿದಾಗ, ರಾಯರೇ ಅವನನ್ನು ಪುಸಲಾಯಿಸಿ ಅಮೆರಿಕಕ್ಕೆ ಕಳುಹಿಸಬೇಕಾಯ್ತು. ಅವನೂ ಅಲ್ಲಿ ಚೆನ್ನಾಗಿ ಓದಿ, ಎಂಎಸ್ ಮುಗಿಸಿ ಈಗ ಒಳ್ಳೆಯ ನೌಕರಿ ಗಿಟ್ಟಿಸಿದ್ದಾನೆ. ತಿಂಗಳಿಗೆ ನಾಲ್ಕು ಲಕ್ಷ ಸಂಬಳವಂತೆ. ಅಬ್ಬಾ ಈಗಿನ ಹುಡುಗರಿಗೆ ಲಕ್ಷ ಅಲಕ್ಷವಾಗಿದೆ. ತಾವು ನೌಕರಿಗೆ ಸೇರಿದಾಗ ತಮ್ಮ ಸಂಬಳ ಕೇವಲ 300 ರೂಪಾಯಿ. ರಾಯರು ಮತ್ತೆ ಮಗ್ಗಲು ಬದಲಿಸಿದರು. ತಮಗೆ ಒಂಟಿತನ ಕಾಡುತ್ತಿತ್ತು. ಹೆಂಡತಿ ಇಲ್ಲ. ಮಗ ಹೋಗಲಿ, ಮಗಳಾದರೂ ತಮ್ಮ ಹತ್ತಿರ ಇರಬಾರದೇ ಎಂದು ಅನಿಸಿದ್ದಿದೆ. ಈಗೇನೋ ನೌಕರಿಯಲ್ಲಿ ಹೊತ್ತು ಹೋಗುತ್ತದೆ. ರಿಟೈರ್ ಆದ ಮೇಲೆ ಹೇಗೆ? ನವೀನನೂ ನೌಕರಿ ಬಿಟ್ಟು ಅಮೆರಿಕಕ್ಕೆ ಬರಲು ಒತ್ತಾಯಿಸುತ್ತಿದ್ದಾನೆ. ಅಲ್ಲಿ ಹೋಗಿ ಮಾಡುವದೇನು? ಈ ಊರು, ಈ ಮನೆ ಬಿಟ್ಟು ಹೋಗುವುದಾದರೂ ಹೇಗೆ? ಮಗನು ನೌಕರಿಗೆ ಹೋದರೆ ಮನೆಯಲ್ಲಿ ತಾವು ಒಬ್ಬರೇ ಕುಳಿತು ಮಾಡುವದಾದರೂ ಏನು?. ಅದಕ್ಕೆ ಸಮಸ್ಯೆ ಬಗೆ ಹರಿಯದೇ ಈಗ ಎರಡು ತಿಂಗಳಿಂದ ಮಗನಿಗೆ ಮದುವೆ ಮಾಡಿಕೊಳ್ಳಲು ಒತ್ತಾಯಿಸುತ್ತಿದ್ದಾರೆ. ಮನೆಯಲ್ಲಿ ಅನ್ನ ಬೇಯಿಸಲಾದರೂ ಒಬ್ಬರು ಬೇಡವೇ ಎಂಬ ವಾದವನ್ನು ಮುಂದಿಟ್ಟದ್ದಾರೆ. ಮಗನೂ ಅವರ ಒತ್ತಾಯಕ್ಕೆ ಕಟ್ಟು ಬಿದ್ದು ಮದುವೆ